*RNI No. KARBIL/2001/47147*

# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**


| ಭಾಗ-III | ಬೆಂಗಳೂರು, ಶುಕ್ರವಾರ, ಡಿಸೆಂಬರ್ ೨೨, ೨೦೧೭ (ಪುಷ್ಯ ೧, ಶಕ ವರ್ಷ ೧೯೩೯) | ನಂ. ೧೨೭೯ |
|---|---|---|
| **Part-III** | ***Bengaluru, Friday, December 22, 2017 (Pushya 1, Shaka Varsha 1939)*** | ***No. 1279*** |


**ಕಾರ್ಮಿಕ ಇಲಾಖೆ**

ಕಾರ್ಮಿಕ ಆಯುಕ್ತರವರ ಕಛೇರಿ, ಕಾರ್ಮಿಕ ಭವನ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29

**ತಿದ್ದುಪಡಿ ಆದೇಶ**

**ಸಂಖ್ಯೆ: ಎನ್‌ಜಿಒ-01/ಸಿಆರ್-12/2017-18, ದಿನಾಂಕ: 19.12.2017**

**ವಿಷಯ:-** ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011 ರ ಪ್ರಕರಣದಲ್ಲಿ ನೀಡಲಾದ ದಿನಾಂಕ : 09.02.2017 ರ ತೀರ್ಪಿನನ್ವಯ ಕಾರ್ಮಿಕ ಇಲಾಖೆಯ "ಹಿರಿಯ ಕಾರ್ಮಿಕ ನಿರೀಕ್ಷಕರು" ವೃಂದದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುವ ಕುರಿತು.

**ಉಲ್ಲೇಖ:**
1. ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲು ಸಂಖ್ಯೆ 2368/2011ರ ಪ್ರಕರಣದಲ್ಲಿ ನೀಡಲಾದ ದಿನಾಂಕ : 09.02.2017 ರ ತೀರ್ಪು.
2. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-1), ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ ಸಿಆಸುಇ 182 ಸೇನೆನಿ 2011 ದಿನಾಂಕ : 06.05.2017.
3. ಈ ಕಛೇರಿಯ ಇದೇ ಆದೇಶ ಸಮ ಸಂಖ್ಯೆ ದಿನಾಂಕ : 09.10.2017
4. ಕರ್ನಾಟಕ ರಾಜ್ಯಪತ್ರ, ವಿಶೇಷ ರಾಜ್ಯಪತ್ರಿಕೆಯಲ್ಲಿ ಕಾರ್ಮಿಕ ಅಧಿಕಾರಿಗಳ ವೃಂದದ ತಾತ್ಕಾಲಿಕ ಜೇಷ್ಠತಾ ಪಟ್ಟಿಯನ್ನು ಅಧಿಕೃತವಾಗಿ ಪ್ರಕಟಿಸಲಾದ ದಿನಾಂಕ : 16.10.2017.
5. ಈ ಕಛೇರಿಯ ಇದೇ ಆದೇಶ ಸಮ ಸಂಖ್ಯೆ ದಿನಾಂಕ : 30.11.2017

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಉಲ್ಲೇಖ (1)ರ ತೀರ್ಪಿನನ್ವಯ ಸರ್ಕಾರವು ಉಲ್ಲೇಖ (2)ರಲ್ಲಿ ನೀಡಿರುವ ಮಾರ್ಗಸೂಚಿಗಳನ್ವಯ, ಉಲ್ಲೇಖ (3)ರ **"ಹಿರಿಯ ಕಾರ್ಮಿಕ ನಿರೀಕ್ಷಕರು"** ವೃಂದದ ತಾತ್ಕಾಲಿಕಾ ಜೇಷ್ಠತಾ ಪಟ್ಟಿಯನ್ನು ಉಲ್ಲೇಖ (4)ರ ಮೂಲಕ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ನಂತರ ಉಲ್ಲೇಖ (5) ರಲ್ಲಿ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿತ್ತು.

ಉಲ್ಲೇಖ (1) ಮತ್ತು (2) ರನ್ವಯ ಕಾರ್ಮಿಕ ನಿರೀಕ್ಷಕರ ಜೇಷ್ಠತಾ ಪಟ್ಟಿಯನ್ನೂ ಸಹ ಪರಿಷ್ಕರಿಸಲಾಗಿದ್ದು, ಸದರಿ ವೃಂದವು ಹಿರಿಯ ಕಾರ್ಮಿಕ ನಿರೀಕ್ಷಕರುಗಳ ಫೀಡರ್ ಕೇಡರ್ ಆಗಿರುತ್ತದೆ. ಕ್ರಮ ಸಂಖ್ಯೆ : 258 ರಿಂದ 263 ರಲ್ಲಿರುವ ನೌಕರರು ಹೈದರಾಬಾದ್-ಕರ್ನಾಟಕ ಪ್ರಾಂತ್ಯದವರಾಗಿದ್ದು, ಭಾರತ ಸಂವಿಧಾನದ ಪರಿಚ್ಛೇದ 371 (ಜೆ) ರಡಿ ರೂಪಿಸಲಾದ 2013ರ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ)

(ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಾವಳಿಯನ್ವಯ ಪ್ರತ್ಯೇಕ ಜೇಷ್ಠತಾ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿರುತ್ತದೆ.

ಹಿರಿಯ ಕಾರ್ಮಿಕ ನಿರೀಕ್ಷಕರು ವೃಂದದ ಜೇಷ್ಠತಾಪಟ್ಟಿಯ ಅನುಬಂಧದಲ್ಲಿರುವ ಕ್ರಮ ಸಂಖ್ಯೆ : 258 ರಲ್ಲಿರುವ ಶ್ರೀ ರವೀಂದ್ರಕುಮಾರ್ (**ಎಸ್**.ಸಿ) ಇವರು ಫೀಡರ್ ಕೇಡರ್ ನಲ್ಲಿ ಕ್ರಮ ಸಂಖ್ಯೆ : 440 ರಲ್ಲಿದ್ದು, ಇವರು ಕ್ರಮ ಸಂಖ್ಯೆ : 260 ರಲ್ಲಿರುವ ಶ್ರೀ ರಮೇಶ್ ಸುಂಬಡ (ಫೀಡರ್ ಕ್ರಮ ಸಂಖ್ಯೆ: 407) ಹಾಗೂ ಕ್ರಮ ಸಂಖ್ಯೆ : 261 ರಲ್ಲಿರುವ ಶ್ರೀಮತಿ ಭುವನೇಶ್ವರಿ ದೇವಿಕೋಟಿಮಠ (ಫೀಡರ್ ಕ್ರಮ ಸಂಖ್ಯೆ: 421) ಇವರುಗಳಿಗಿಂತ ಜೇಷ್ಠತೆಯಲ್ಲಿ ಕಿರಿಯರಾಗಿರುವುದರಿಂದ ಹಾಗೂ 259 ರಲ್ಲಿರುವ ಶ್ರೀ ಶೇಖರ್ ಗೌಡ (**ಎಸ್‌ಟಿ**) ಇವರು ಫೀಡರ್ ಕೇಡರ್‌ನಲ್ಲಿ ಕ್ರಮ ಸಂಖ್ಯೆ 497 ರಲ್ಲಿದ್ದು, ಹಿರಿಯ ಕಾರ್ಮಿಕ ನಿರೀಕ್ಷಕರು ವೃಂದದ ಜೇಷ್ಠತಾ ಪಟ್ಟಿಯಲ್ಲಿರುವ ಕ್ರಮ ಸಂಖ್ಯೆ 258, 260, 261, 262, 263 ರಲ್ಲಿರುವ ಹಿರಿಯ ಕಾರ್ಮಿಕ ನಿರೀಕ್ಷಕರುಗಳಿಗಿಂತ ಜೇಷ್ಠತೆಯಲ್ಲಿ ಕಿರಿಯರಾಗಿರುವುದರಿಂದ ಉಲ್ಲೇಖ (5)ರಲ್ಲಿ ಪ್ರಕಟಿಸಲಾದ ಹಿರಿಯ ಕಾರ್ಮಿಕ ನಿರೀಕ್ಷಕರು ವೃಂದದ ಜೇಷ್ಠತಾ ಪಟ್ಟಿಯ ಅನುಬಂಧದಲ್ಲಿ ಈ ಕೆಳಕಂಡಂತೆ ತಿದ್ದುಪಡಿ ಹೊರಡಿಸಲಾಗಿದೆ.

1. ಕ್ರಮ ಸಂಖ್ಯೆ : 260 ರಲ್ಲಿರುವ ಶ್ರೀ ರಮೇಶ್ ಸುಂಬಡ ಇವರ ಕ್ರಮ ಸಂಖ್ಯೆಯನ್ನು : 258 ಎಂದು ಓದಿಕೊಳ್ಳುವುದು.
2. ಕ್ರಮ ಸಂಖ್ಯೆ 261 ರಲ್ಲಿರುವ ಶ್ರೀಮತಿ ಭುವನೇಶ್ವರಿ ದೇವಿ ಕೋಟಿಮಠ ಇವರ ಕ್ರಮ ಸಂಖ್ಯೆಯನ್ನು 259 ಎಂದು ಓದಿಕೊಳ್ಳುವುದು.
3. ಕ್ರಮ ಸಂಖ್ಯೆ : 258 ರಲ್ಲಿರುವ ಶ್ರೀ ರವೀಂದ್ರಕುಮಾರ್ (**ಎಸ್**.ಸಿ.) ಇವರ ಕ್ರಮ ಸಂಖ್ಯೆಯನ್ನು : 260 ಎಂದು ಓದಿಕೊಳ್ಳುವುದು.
4. ಕ್ರಮ ಸಂಖ್ಯೆ 262 ರಲ್ಲಿರುವ ಶ್ರೀ ರವಿಕುಮಾರ್ ಟಿ.ಎಸ್ ಇವರ ಕ್ರಮ ಸಂಖ್ಯೆಯನ್ನು 261 ಎಂದು ಓದಿಕೊಳ್ಳುವುದು.
5. ಕ್ರಮ ಸಂಖ್ಯೆ 263 ರಲ್ಲಿರುವ ಶ್ರೀ ಚನ್ನಾರೆಡ್ಡಿ ಚವ್ಹಾಣ್ ಇವರ ಕ್ರಮ ಸಂಖ್ಯೆಯನ್ನು 262 ಎಂದು ಓದಿಕೊಳ್ಳುವುದು.
6. ಕ್ರಮ ಸಂಖ್ಯೆ : 259 ರಲ್ಲಿರುವ ಶ್ರೀ ಶೇಖರ್‌ಗೌಡ (**ಎಸ್‌ಟಿ**) ಇವರ ಕ್ರಮ ಸಂಖ್ಯೆಯನ್ನು : 263 ಎಂದು ಓದಿಕೊಳ್ಳುವುದು.

**ಕಾರ್ಮಿಕ ಆಯುಕ್ತರ ಪರವಾಗಿ**
ಅಪರ ಕಾರ್ಮಿಕ ಆಯುಕ್ತರು
(ಆಡಳಿತ ಮತ್ತು ಲೆಕ್ಕಪತ್ರ)

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ ಘಟಕ, ಬೆಂಗಳೂರು. (ಪಿ7) ಪ್ರತಿಗಳು: 50